**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್.ನಂ.: 205/2017**

**ಚಾ.ಸಾ.1 – ಮರಿರಾಜ**

**ಪ್ರಮಾಣೀಕರಿಸಿದ ದಿನಾಂಕ: – 05.01.2022**

**ಪಾಟಿ ಸವಾಲು: 7 ರಿಂದ 9ನೇ ಪ್ರತಿವಾದಿಗಳ ಪರ ವಕೀಲರಿಂದ: –**

ನಾನು 02 ವರ್ಷಗಳ ಹಿಂದೆ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದ್ದು, ಅದಕ್ಕೂ ಮೊದಲು ಸರ್ಕಾರಿ ಉಪನ್ಯಾಸಕನಾಗಿ ಸೇವೆ ಸಲ್ಲಿಸಿದ್ದೇನೆ ಎಂದರೆ ಸರಿ. ನಮ್ಮ ತಂದೆ ವಿದ್ಯಾವಂತರಾಗಿದ್ದರು ಎಂದರೆ ಸರಿ. ನನ್ನ ತಂದೆ ಸುಮಾರು 10 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ ಎಂದರೆ ಸರಿ. ನನ್ನ ತಂದೆ ಪತ್ರ ಬರಹಗಾರರಾಗಿದ್ದರು ಎಂದರೆ ಸರಿಯಲ್ಲ.

ಸರ್ವೆ ನಂ.:6ರಲ್ಲಿ ಒಟ್ಟು ವಿಸ್ತೀರ್ಣ 3 ಎಕರೆ 33 ಗುಂಟೆ ಇದೆ. ಸರ್ವೆ ನಂ.:6 ತೋಟಿ ಇನಾಮ್ತಿ ಜಮೀನು ಎಂದರೆ ಸರಿ. ಸರ್ವೆ ನಂ.:6 ನಮ್ಮ ತಾತನಿಗೆ ಸರ್ಕಾರದಿಂದ ಮಂಜೂರಾಗಿತ್ತು ಎಂದರೆ ಸರಿ. ನಂತರ ನಮ್ಮ ದೊಡ್ಡಪ್ಪ ಮತ್ತು ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪರವರಿಗೆ ಮರು ಮಂಜೂರು ಆಗಿತ್ತು ಎಂದರೆ ಸರಿ. 3 ಎಕರೆ 33 ಗುಂಟೆ ಪೈಕಿ ದಾವಾ ಸ್ವತ್ತನ್ನು ಹೊರತುಪಡಿಸಿ ಉಳಿದ ಸ್ವತ್ತುಗಳು ನಮ್ಮ ದೊಡ್ಡಪ್ಪ ಮತ್ತು ನಮ್ಮ ತಂದೆಯ ಹೆಸರಿನಲ್ಲಿ 2 ಎಕರೆ 15 ಗುಂಟೆ ಜಂಟಿ ಖಾತೆ ಇದೆ ಎಂದರೆ ಸರಿ. ನಮ್ಮ ತಾಯಿ ಪಿಳ್ಳಮ್ಮರವರ ಹೆಸರಿಗೆ 18 ಗುಂಟೆ ಇದೆ ಎಂದರೆ ಸರಿ. ಅದೇ ರೀತಿ 7 ರಿಂದ 9ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ 24 ಗುಂಟೆಗೆ ಖಾತೆ ಇದೆ ಎಂದರೆ ಸರಿ. ಸರ್ವೆ ನಂ.:6ರಲ್ಲಿ ನಮ್ಮ ತಂದೆಗೆ 1 ಎಕರೆ 11 ಗುಂಟೆಗೆ ಮರು ಮಂಜೂರಾಗಿತ್ತು. ನಾನು ಮರು ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ಹೇಳಿದಂತೆ ಮರು ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. 7 ರಿಂದ 9ನೇ ಪ್ರತಿವಾದಿಗಳ ತಂದೆಗೆ ಮಾರಾಟ ಮಾಡಿದ ಸ್ವತ್ತನ್ನು ಹೊರತುಪಡಿಸಿ ಉಳಿಕೆ ಸ್ವತ್ತು ನಮ್ಮ ಬಳಿ ಇದೆ ಎಂದರೆ ಸರಿ. ಸದರಿ ಉಳಿಕೆ ಸ್ವತ್ತನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವೆಗೆ ಸೇರಿಸಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದನ್ನು ನಾವು ಭಾಗ ಮಾಡಿಕೊಂಡಿದ್ದೇವೆ ಎಂದು ನುಡಿದಿರುತ್ತಾರೆ.

ದಾವಾ ಸ್ವತ್ತು 7 ರಿಂದ 9ನೇ ಪ್ರತಿವಾದಿಗಳ ತಂದೆಗೆ ಯಾವಾಗ ಮಾರಾಟ ಆಗಿದೆ ಎಂದು ನನಗೆ ಗೊತ್ತಿಲ್ಲ.

1974ರಲ್ಲಿ 7 ರಿಂದ 9ನೇ ಪ್ರತಿವಾದಿಗಳ ತಂದೆಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಗ್ರಾಮದಲ್ಲಿ ಸಿ.ಮುನಿರಾಜು ಎನ್ನುವ ಹೆಸರಿನ ವ್ಯಕ್ತಿ ನಾನೊಬ್ಬನೇ ಇದ್ದೇನೆ. ನಾನು ಸಾಕ್ಷಿಯಾಗಿ ನಿ.ಪಿ.2 ಕ್ರಯಪತ್ರದಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಾರಾಟದ ವಿಚಾರ ನನಗೆ ಗೊತ್ತಿದ್ದರೂ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 7 ರಿಂದ 9ನೇ ಪ್ರತಿವಾದಿಗಳ ತಂದೆ ನಮ್ಮ ತಂದೆಗೆ ಮೋಸ ಮಾಡಿ ಕ್ರಯಪತ್ರ ಬರೆಸಿಕೊಂಡು ಖರೀದಿ ಮಾಡಿದ್ದಾರೆ ಎನ್ನುವ ವಿಚಾರವಾಗಿ ನಾನು ಯಾವುದೇ ದೂರು ಸಲ್ಲಿಸಿಲ್ಲ, ನ್ಯಾಯಾಲಯದಲ್ಲಿ ಈ ಹಿಂದೆ ಎಲ್ಲಿಯೂ ನಿ.ಪಿ.2ನ್ನು ಪ್ರಶ್ನಿಸಿಲ್ಲ. ದಾವಾ ಸ್ವತ್ತನ್ನು ಹೊರತುಪಡಿಸಿ ಉಳಿದ ನಮ್ಮ ಸ್ವತ್ತಿನಲ್ಲಿ ನಾವು ಜಂಟಿ ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ.

ಸರ್ವೆ ನಂ.:4ರಲ್ಲಿ ನಮ್ಮ ಸ್ವತ್ತುಗಳಿವೆ ಎಂದರೆ ಸರಿ, ಸಾಕ್ಷಿ ಮುಂದುವರೆದುಅವುಗಳನ್ನು ವಿಭಾಗ ಮಾಡಿಕೊಂಡಿದ್ದೇವೆ ಎನ್ನುತ್ತಾರೆ. ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸರ್ವೆ ನಂ.:4ರ ಸ್ವತ್ತುಗಳು ನಮ್ಮ ತಂದೆ ಹೆಸರಿನಲ್ಲಿ ದಾಖಲೆಗಳಿವೆ. ಸರ್ವೆ ನಂ.:4ರ ಸ್ವತ್ತುಗಳಲ್ಲಿ ನಾವು ಇನ್ನೂ ಜಂಟಿ ಸ್ವಾಧೀನದಲ್ಲಿದ್ದೇವೆ. ವಿಭಾಗ ಆಗದೆ ಇದ್ದರೂ ನಾನು ವಿಭಾಗ ಆಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ಧೇನೆ ಎಂದರೆ ಸರಿಯಲ್ಲ. ನನ್ನ ತಂದೆ ನೋಂದಾಯಿತ ಕ್ರಯಪತ್ರವನ್ನು 7 ರಿಂದ 9ನೇ ಪ್ರತಿವಾದಿಗಳ ತಂದೆಗೆ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನದಲ್ಲಿರುವ ಕುರಿತು ಯಾವುದೇ ದಾಖಲೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ 7 ರಿಂದ 9ನೇ ಪ್ರತಿವಾದಿಗಳ ತಂದೆಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದರೂ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೇ ಕ್ರಯಪತ್ರವನ್ನು ಬರೆದುಕೊಟ್ಟಿರುವ ಕಾರಣ ಪರಿಹಾರ

ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪ್ರತಿವಾದಿಗಳ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಹೊಸಕೋಟೆ.**